## ಕಾಯನ ಬದುಕಿನಲ್ಲಿ ಮರುಕಳಿಸಿತೇ ಇತಿಹಾಸ?

ಅಷ್ಟರಲ್ಲಿ ಅಲ್ಲಿಗೆ ಜೀಪಿನಲ್ಲಿ ಬಂದಿಳಿದ ಯೋಗೀಶರು, ದಿಕ್ಕೆಟ್ಟವರಂತೆ ನಿಂತಿದ್ದ ಕಾಯ ಮತ್ತು ಜಂಪಣ್ಣನನ್ನು ಕಂಡು ತಾವಾಗಿಯೇ ಮಾತನಾಡಿಸಿದರು.

'ನೀವಿಬ್ಬರೂ ಇಲ್ಲಿ..? ಅಲ್ಲಿ ನಿಮ್ಮ ಮನೆಗಳು ಏನಾದವು..? ಸೇತುವೆ ಮುರಿದು ಬಿತ್ತಲ್ವಾ..?' ಅವರನ್ನು ಕಾಣುತ್ತಲೇ ಕಾಯನ ದುಃಖದ ಕಟ್ಟೆ ಒಡೆಯಿತು.

'ಏನಾಯಿತು ಜಂಪಣ್ಣ..?' ಎಂದಾಗ ಜಂಪಣ್ಣ ನಡೆದುದೆಲ್ಲವನ್ನೂ ವಿವರಿಸಿದ.

'ಅಣ್ಣಾ.. ಈಗ ನೀವೇ ನಮಗೆ ಸಹಾಯ ಮಾಡಬೇಕು.. ದಮ್ಮಯ್ಯ..' ಮಳೆಯಲ್ಲೇ ಜಂಪಣ್ಣ ಯೋಗೀಶರ ಕಾಲು ಹಿಡಿದು ಬೇಡಿದ.

ಯೋಗೀಶರು ಅಲ್ಲೇ ನಿಂತಿದ್ದ ಪೇದೆಯ ಬಳಿ ನಡೆದುದೆಲ್ಲವನ್ನೂ ತಿಳಿಸಿ ಸಹಾಯ ಮಾಡಲು ಕೋರಿದರು.

'ಕೆಲವರು ಎಲ್ಲಿಂದಲೋ ಬಂದಿದ್ದಾರೆ.. ಕೆಲವರ ಮನೆ ಬಿದ್ದು ಹೋಗಿದೆ.. ಅಂಥವರಿಗೆ ಉಳಿದುಕೊಳ್ಳಲು ತಾತ್ಕಾಲಿಕ ಪುನರ್ವಸತಿ ಕೇಂದ್ರವನ್ನು ತೆರೆಯಲಾಗಿದೆ.. ಅವರಿಗೆ ಉಣ್ಣಲು ಗಂಜಿ, ಚಾಪೆ, ಹೊದಿಕೆ ಮತ್ತು ಅಗತ್ಯ ಸಾಮಾನುಗಳ ಪೂರೈಕೆ ಮಾಡಲು ಜಿಲ್ಲಾಡಳಿತ ಆದೇಶಿಸಿದೆ.. ಅವರಿಗೆಲ್ಲಾ ಮೈದಾನದಲ್ಲಿರುವ ರಂಗಮಂದಿರದಲ್ಲಿ ವ್ಯವಸ್ಥೆ ಮಾಡಲಾಗಿದೆ.. ನಿಮ್ಮವರೆಲ್ಲಾ ಅಲ್ಲಿ ಇರಬಹುದಾ .. ಹೋಗಿ ನೋಡಿ..' ಎಂದ.

ಯೋಗೀಶರೇ ಮುತುವರ್ಜಿವಹಿಸಿ ಅವರನ್ನು ತಮ್ಮ ಜೀಪಿನಲ್ಲಿ ಕುಳ್ಳಿರಿಸಿ

